ಜಮಖಂಡಿ ಬಸ್ ಸ್ಟ್ಯಾಂಡ್ ನವೀಕರಿಸುವುದು

75 : (83)

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಅ) ಬಹಳ ಹಳೆಯದಾದ ಹಾಗೂ ಅತ್ಯಂತ ಕೇಂದ್ರ ಸ್ಥಳವಾದ ಜಮಖಂಡಿ ನಗರದ ಬಸ್ ಸ್ಟ್ಯಾಂಡ್‌ನ್ನು ಬದಲಾಯಿಸಿ ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದು?

ಆ) ಬಸ್‌ಸ್ಟ್ಯಾಂಡ್ ಒಳಗಿರುವ ವರ್ಕಶಾಪ್ ಹೊರಗಡೆ ಬದಲಾಯಿಸಬಹುದೇ?

ಶ್ರೀ ಆರ್. ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು(ಗೃಹ ಮತ್ತು ಸಾರಿಗೆ))

ಅ) ಹಳೆಯ ಬಸ್ ನಿಲ್ದಾಣವನ್ನು ಕೆಡವಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ)ಬಸ್ ಸ್ಟ್ಯಾಂಡ್ ಪಕ್ಕದಲ್ಲಿರುವ ಡಿಪೋವನ್ನು ಸ್ಥಳಾಂತರಿಸಲು ಉಚಿತ ಹಾಗೂ ಸೂಕ್ತ ನಿವೇಶನ ದೊರಕಿದ ನಂತರ ಪರಿಶೀಲಿಸಲಾಗುವುದು.

ವಸತಿ ಯೋಜನೆಯಿಂದ ಮನೆ ಮಂಜೂರಾತಿ

81 – (63)

ಅ) ಕರ್ನಾಟಕ ರಾಜ್ಯಾದ್ಯಂತ 2008–09 ನೇ ಸಾಲಿನಿಂದ ಇವರೆವಿಗೂ ವಿವಿಧ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ವರ್ಷಾವಾರು ವಿವರ ನೀಡುವುದು).

ಆ)ಮೇಲ್ಕಂಡ ವಸತಿ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆಗೊಂಡ ಹಣವೆಷ್ಟು, ಈ ಪೈಕಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಕರ್ನಾಟಕ ರಾಜ್ಯಾದ್ಯಂತ ಬಸವ ವಸತಿ ಯೋಜನೆಯಡಿ ವಿವಿಧ ತಾಲ್ಲೂಕುಗಳಿಗೆ ಮಂಜೂರಾದ ಮನೆಗಳ ಪೈಕಿ ಎಷ್ಟು ಮನೆಗಳಿಗೆ ರಾಜೀವ್‌ಗಾಂಧಿ ವಸತಿ ನಿಗಮದಿಂದ ಅನುಮೋದನೆ ನೀಡಲಾಗಿದೆ; (ತಾಲ್ಲೂಕುವಾರು ವಾರ್ಷಿಕವಾರು ಮನೆಗಳ ಸಂಖ್ಯೆಯ ವಿವರ ನೀಡುವುದು)